# ನಿಜವನ್ನು ಪ್ರಿಯವಾಗಿ ಹೇಳಿ

ಆ ಅರಸನಿಗೆ ಹುಟ್ಟಿನಿಂದಲೇ ಒಂದು ಕಣ್ಣು ಇರಲಿಲ್ಲ. ಅವನು ಒಳ್ಳೆಯವನು, ಪ್ರತಿಭಾವಂತ, ನೀತಿವಂತ ವ್ಯಕ್ತಿ. ಒಮ್ಮೆ ಅವನು ತನ್ನ ಚಿತ್ರವನ್ನು ಬರೆಯಲು ಆ ದೇಶದ ಮೂವರು ಸುಪ್ರಸಿದ್ಧ ಕಲಾವಿದರನ್ನು ಕರೆಸಿದ್ದ. ಅತ್ಯುತ್ತಮ ಚಿತ್ರಕ್ಕೆ ಬಹುಮಾನವೂ ಇತ್ತು.

ಮೂವರೂ ಸಮಾನ ಪ್ರತಿಭೆಯುಳ್ಳವರು. ತಂತಮ್ಮ ಕಲ್ಪನಾಶಕ್ತಿಗೆ ಅನುಗುಣವಾಗಿ ಅವರು ಚಿತ್ರವನ್ನು ರಚಿಸಲು ಆರಂಭಿಸಿದರು. ಮೊದಲನೆಯ ಕಲಾವಿದ ಅರಸನನ್ನು ಒಂದು ಕಣ್ಣಿರುವಂತೆ ಚಿತ್ರಿಸಿದರೆ ಅವನ ಕೋಪಕ್ಕೆ ಗುರಿಯಾಗಬೇಕಾದೀತು ಎಂದು ಹೆದರಿ, ರಾಜನಿಗೆ ಎರಡೂ ಕಣ್ಣಿರುವಂತೆ ಚಿತ್ರ ಬರೆದ. ಎರಡನೆ ಕಲಾವಿದ, 'ಕಲೆ ಯಾವತ್ತಿದ್ದರೂ ಸತ್ಯವನ್ನೇ ಬಿಂಬಿಸಬೇಕು' ಎಂಬ ಉದ್ದೇಶದಿಂದ ರಾಜನಿಗೆ ಒಂದೇ ಕಣ್ಣು ಇರುವಂತೆ ಚಿತ್ರಿಸಿದ.

ಮೂರನೆಯ ಕಲಾವಿದ ಜಾಣ. ಅವನು ಅರಸನ ಕೈಯಲ್ಲಿ ಬಿಲ್ಲುಬಾಣ ಕೊಟ್ಟ. ಗುರಿ ಇಡುವ ನೆಪದಲ್ಲಿ ಒಂದು ಕಣ್ಣನ್ನು (ಊನವುಳ್ಳ ಕಣ್ಣನ್ನು) ಮುಚ್ಚಿಕೊಂಡಿರುವಂತೆ ಚಿತ್ರಿಸಿದ.

ಮೂರೂ ಚಿತ್ರಗಳು ಉತ್ತಮವಾಗಿದ್ದರೂ ಬಹುಮಾನ ಮೂರನೆಯವನಿಗೇ ದೊರೆಯಿತು. ಅವನು ಸತ್ಯವನ್ನು ಮರೆಮಾಚಲಿಲ್ಲ, ಆದರೆ ಅದನ್ನು ಪ್ರಿಯವಾಗುವಂತೆ ಹೇಳಿದ. ಕಟುವಾದ ಸತ್ಯವನ್ನು ನಾಜೂಕಾಗಿ ಹೇಳಿದ್ದ!

'ಸತ್ಯಮ್ ಬ್ರೂಯಾತ್, ಪ್ರಿಯಮ್ ಬ್ರೂಯಾತ್, ನ ಬ್ರೂಯಾತ್ ಸತ್ಯಮ್ ಅಪ್ರಿಯಮ್...' ಅಂದರೆ ನಿಜವನ್ನೇ ಹೇಳಬೇಕು, ಪ್ರಿಯವಾದುದನ್ನೇ ಹೇಳಬೇಕು; ಅಪ್ರಿಯವಾದ ನಿಜವನ್ನು ಹೇಳಬಾರದು ಎನ್ನುವುದನ್ನು ಮೂರನೇ ಚಿತ್ರ ಸಾರಿತು.

● ಕೆ. ನಿರುಪಮಾ

